ಶ್ರೀ ಎ. ಎಲ್. ಶಿವಪ್ಪ.—1965-66ರಲ್ಲಿ ಹರಾಜು ಮಾಡಿದಾಗ 140 ರೂಪಾಯಿಗಳಿಗೆ ಕೇಳಿದ್ದರಿಂದ ಅದು ಸ್ಥಳೀಯ ಅಧಿಕಾರಿಗೆ ಸಮಾಧಾನವಾಗದೆ ಹೆಚ್ಚು ಹಣ ಕೊಡುವುದಾಗಿ ಯಾಗೋ ಹೇಳಿದಾಗ ಟೆಂಡರ್ ಕರೆದಿರುವುದು ಗಮನಕ್ಕೆ ಬಂದಿದೆಯೇ ?

†ಶ್ರೀ ಎಚ್. ಎ. ಕೌಜಲಗಿ.—ಹರಾಜು ಮಾಡಿರುವುದು ಗೊತ್ತಿಲ್ಲ. ಟೆಂಡರು ಕರೆದಿರುವುದು ನಿಜ.

ಶ್ರೀ ವಾಟಾಳ್ ನಾಗರಾಜ್.—ಜನರನ್ನು ಹರಾಜು ಹಾಕುತ್ತಿದ್ದರು. ಈಗ ದೇವರನ್ನೂ ಹರಾಜು ಹಾಕುತ್ತಿದ್ದಾರೆ. ದೇವರನ್ನು ಹರಾಜು ಹಾಕಲು ಯಾವಾಗಿನಿಂದ ಕಾನೂನನ್ನು ಮಾಡರಾಗಿದೆ ?

ಅಧ್ಯಕ್ಷರು.—ಅದು ಇರ್ರೆಲವೆಂಟ್.

ಶ್ರೀ ಎಂ. ನಾಗಪ್ಪ.—ಟೆಂಡರು ಕರೆದಿರುವ ಉದ್ದೇಶ ಉತ್ಸವ ಮೂರ್ತಿಯನ್ನು ಮಾರಾಟ ಮಾಡಬೇಕೆಂದಿರುವ ಹಾಗೆ ತೋರುತ್ತದೆ. ಅದುದರಿಂದ ಮುಂದಾದರೂ ಉತ್ಸವಮೂರ್ತಿಗಳನ್ನು ಖಡಾರ್‌ಗಳನ್ನು ಹೀಗೆ ಮಾರಾಟ ಮಾಡಬಾರದೆಂದು ಆಜ್ಞೆ ಮಾಡರಾಗುವುದೆ ?

ಶ್ರೀ ಹೆಚ್. ಎ. ಕೌಜಲಗಿ.—ಉತ್ಸವಮೂರ್ತಿ ಭಿನ್ನವಾಗಿರುವುದರಿಂದ ಅದನ್ನು ಪೂಜೆ ಮಾಡುವುದರಲ್ಲಿ ಅರ್ಥವಿಲ್ಲ. ಅದಕ್ಕಾಗಿ ಸಂಬಂಧಪಟ್ಟ ಸಮಿತಿಯೇ ಈ ರೀತಿ ನಿರ್ಣಯ ಮಾಡಿದೆ. ಮಾನ್ಯ ಸದಸ್ಯರು ಹೇಳಿರುವ ಅಭಿಪ್ರಾಯವನ್ನು ವಿಚಾರ ಮಾಡರಾಗುತ್ತದೆ.

1-00 P.M.

Construction of Museum in Memory of late Dr. M. Visvesvaraya

440. **Sri P. VENKATAGIRIYAPPA** (Kolar).—

Will the Chief Minister be pleased to state :—

(*a*) whether there is any proposal before Government to construct a museum or a monument at Muddenahalli, Chikkaballapur Taluk, the birth place of Dr. Sir M. Visveswaraya to commemorate his memory ;

(*b*) if so, the steps taken to implement the proposals ?

Sri VEERENDRA PATIL (Chief Minister).—

(*a*) There is a proposal before the Government to develop the Samadhi of late Dr. Sir M. Visvesvaraya at Muddenahalli.

(*b*) The proposal is under consideration of Government.

ಶ್ರೀ ಪಿ. ವೆಂಕಟಗಿರಿಯಪ್ಪ.—ಈ ಸಮಾಧಿಯನ್ನು ಅಭಿವೃದ್ಧಿಗೊಳಿಸುವ ಸಲಹೆಯೊಂದು ಸರ್ಕಾರದವರ ಮುಂದೆ ಇದೆ ಎಂದು ಹೇಳಿದ್ದೀರಿ. ಎಷ್ಟು ವರ್ಷದಿಂದ ಇದೆ ? ಮತ್ತು ಅದಕ್ಕೆ ಸರ್ಕಾರದಿಂದ ಎಷ್ಟು ಹಣ ಖರ್ಚಾಗಬಹುದು, ಅಂದಾಜಾವೆಚ್ಚ ಎಷ್ಟು ? ಅದನ್ನು ಕಾರ್ಯಗತ ಗೊಳಿಸುವುದಕ್ಕೆ ಎಷ್ಟು ವರ್ಷಕಾಲಾವಕಾಶ ಬೇಕು ?

†ಶ್ರೀ ವೀರೇಂದ್ರ ಪಾಟೀಲ್.—1966ರಲ್ಲಿ ಈ ತರಹದ ಒಂದು ವಿಚಾರ ಬಂದು ಕೆಲವು ಪ್ರಪೋಸರ್ಸ್ ನವ್ ಅಧಿಕಾರಿಗಳಿಗೆ ಮಾಡುವುದಕ್ಕೆ ಹೇಳಿದ್ದೆವು, ಎರಡು ಎರಡೂವರೆ ಲಕ್ಷ ರೂಪಾಯಿ ಖರ್ಚಾಗುತ್ತದೆ. ಅಂತಿಮ ನಿರ್ಣಯ ತೆಗೆದುಕೊಂಡಿಲ್ಲ.